


## ಸಮಯೋಚಿತ ಬರಹ

‘ಇದು ಪರೀಕ್ಷೆಯ ಸಮಯ’, ಡಾ.ಕೆ.ಎಸ್. ಪವಿತ್ರ ಅವರ ಮುಖಪುಟ ಲೇಖನ (ಸುಧಾ, ಫೆ. 2) ಸಮಯೋಚಿತವಾಗಿದೆ. ಪರೀಕ್ಷಾ ಸಮಯದಲ್ಲಿನ ವಿದ್ಯಾರ್ಥಿಗಳ ಹಾಗೂ ಪೋಷಕರ ಆತಂಕ, ತಲ್ಲಣಗಳನ್ನು ಲೇಖಕಿ ಸೊಗಸಾಗಿ ತಿಳಿಸಿದ್ದಾರೆ. ಉಪಯುಕ್ತ ಸಲಹೆ, ಮಾಹಿತಿಗಳನ್ನೂ ನೀಡಿದ್ದಾರೆ. ಪರಸ್ಪರ ಸ್ಪರ್ಧೆ, ಹೆಚ್ಚು ಅಂಕ ಗಳಿಸಿದ ಮಕ್ಕಳೊಡನೆ ಹೋಲಿಕೆ, ಮುಂದಿನ ತರಗತಿಗೆ ಸೀಟು ಲಭ್ಯತೆ.. ಮುಂತಾದ ವಿಷಯಗಳಿಂದ ಪೋಷಕರು ಹಾಗೂ ಮಕ್ಕಳು ವಿಪರೀತ ಒತ್ತಡಕ್ಕೊಳಗಾಗುತ್ತಿರುವುದು ಆತಂಕದ ವಿಷಯ.

–ಸು.ವಿಜಯಲಕ್ಷ್ಮಿ ಶಿವಮೊಗ್ಗ, ನರೇಂದ್ರ ಶಿರಕಜೆ ಮೈಸೂರು

## ಅರ್ಥಪೂರ್ಣ

‘ವಿಚಾರ ಲಹರಿ’ಯಲ್ಲಿ ‘ಗುಲಾಮಗಿರಿ ಮತ್ತು ಅಸ್ಪೃಶ್ಯತೆ’ (ಮೂಚಿ) ಅರ್ಥಪೂರ್ಣವಾಗಿದೆ. ಮುಗ್ಧತೆ ಮತ್ತು ಅಸ್ಪೃಶ್ಯತೆ ತಳುಕು ಹಾಕಿಕೊಂಡಿದೆ.

–ರಾಜಶೇಖರ ಹಾದಿಮನಿ ಧಾರವಾಡ

## ಚಿಂತನಾರ್ಹ ಬರಹ

‘ನಿಮ್ಮೊಡನೆ’ಯಲ್ಲಿ ‘ಕಲಿಕೆಯ ಮಟ್ಟ ಏಕೆ ಕುಸಿಯುತ್ತಿದೆ?’(ಬಿ.ಎಂ. ಹನೀಫ್) ಬರಹ ಓದಿದಾಗ ಗಾಬರಿಯಾಯಿತು. ದೇಶದ ಭವಿಷ್ಯತ್ತಿನ ಪ್ರಜೆಗಳಾಗ ಬೇಕಾದವರ ಕಲಿಕಾ ಮಟ್ಟ ಕುಸಿಯುತ್ತಿರುವುದು ವಿಷಾದದ ಸಂಗತಿ. ಇದನ್ನು ಕಂಡು ಸರ್ಕಾರ, ಇಲಾಖೆ, ಅಧಿಕಾರಿಗಳು, ಶಿಕ್ಷಕರು ಹಾಗೂ ಪೋಷಕರು ಗಮನ ಹರಿಸಬೇಕಾಗಿದೆ. ಚಿಂತನಾರ್ಹ ಲೇಖನ ಇದು.

–ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

## ಎಷ್ಟೊಂದು ವ್ಯತ್ಯಾಸ..?

‘ಮಕ್ಕಳ ಹೊರೆ ಕಡಿಮೆ ಮಾಡ್ತೀರಾ?’ (ಸೀತಾ ಕೇಶವ ಸಿಡ್ನಿ) ಲೇಖನ ಓದಿ ‘ಛೆ ನಮ್ಮ ಮಕ್ಕಳು ಆಸ್ಟ್ರೇಲಿಯಾದಲ್ಲಿ ಹುಟ್ಟಿದ್ದರೆ ಎಷ್ಟು ಚೆನ್ನಾಗಿತ್ತು’ ಅನಿಸಿತು. ಇಲ್ಲಿ ಶಾಲಾ ಮಕ್ಕಳು ಮಣಭಾರದ ಚೀಲ ಹೊತ್ತು ಏದುಸಿರು ಬಿಡುವುದು ಕಂಡಾಗ ಅಲ್ಲಿಯ ಚಿಣ್ಣರು ಎಷ್ಟು ಪುಣ್ಯವಂತರು ಎಂದೆನಿಸುತ್ತದೆ. ಅಲ್ಲಿಯ ಬೋಧನಾ ಕ್ರಮಕ್ಕೂ, ಇಲ್ಲಿನದಕ್ಕೂ ಎಷ್ಟು ವ್ಯತ್ಯಾಸ? ನಮ್ಮ ಶಿಕ್ಷಣ ತಜ್ಞರು ಯಾಕೆ ಸುಧಾರಣೆ ತರುತ್ತಿಲ್ಲ?

–ಕೇಶವ ಪ್ರಭು ಶಿವಮೊಗ್ಗ

## ಇಲ್ಲೂ ಇರಬಾರದೆ?

ಮಕ್ಕಳ ಹೊರೆ ಕುರಿತ ಲೇಖನ ಓದಿದಾಗ ಅಲ್ಲಿಯ ವ್ಯವಸ್ಥೆ ಇಲ್ಲೂ ಇರಬಾರದೆ ಎನಿಸಿತು. ಫೈಲಿಂಗ್ ವ್ಯವಸ್ಥೆ, ಹೋಮ್‌ವರ್ಕ್ ಇಲ್ಲದ್ದು, ಬಾಯಿಪಾಠ ವ್ಯವಸ್ಥೆ ಇಲ್ಲದ್ದು ನೋಡಿದಾಗ ಅಲ್ಲಿನ ಮಕ್ಕಳು ಎಷ್ಟು ಅದೃಷ್ಟವಂತರು ಎನಿಸಿತು.

–ನೀಲಮ್ಮ ಕುಮಾರಪ್ಪ ಲಿಂಗಸುಗೂರು

## ಸಕಾಲಿಕ ಲೇಖನ

‘ಸೆಲ್ಫೀಗಳ ಹಿಂದಿನ ಸೈಕಾಲಜಿ’ (ಡಾ.ಪ್ರೇಮಲತ ಬಿ.) ಲೇಖನ ಸಕಾಲಿಕ. ಇಂದಿನ ಯುವಜನರಲ್ಲಿ ಒಂದು ಸ್ಮಾರ್ಟ್ ಫೋನ್ ಇರಲೇಬೇಕು. ಸೆಲ್ಫೀ ಕ್ಲಿಕ್ಕಿಸಿಕೊಳ್ಳುವುದು, ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುವುದು ಒಂದು ಶೋಕಿ ಆಗಿಬಿಟ್ಟಿದೆ. ಇಂದು ಸೆಲ್ಫೀ ತೆಗೆಯುವ ಹವ್ಯಾಸ ಅತಿರೇಕವಾಗಿದೆ.

–ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಅಮೃತೇಶ ತಂಡರ ಅಣ್ಣಿಗೇರಿ

## ಪ್ರವಾಸ ಲೇಖನ

‘ಕಡಲ ನಡುವಣ ತಾಣ ಧನುಷ್ಕೋಟಿ’ (ದಿನೇಶ ಪಟವರ್ಧನ್) ಲೇಖನ ಚೆನ್ನಾಗಿದೆ. ನಾನು ಈ ಹಿಂದೆ ಅಲ್ಲಿಗೆ ಭೇಟಿ ನೀಡಿದ್ದು ನೆನಪಾಯಿತು. ಚಂಡಮಾರುತದಿಂದ ನಾಶವಾದ ರೈಲು ನಿಲ್ದಾಣದ ಚಿತ್ರ ನೋಡಿ ಮನಸ್ಸಿಗೆ ನೋವಾಯಿತು.

–ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

## ಮುದ ನೀಡಿತು

ಧನುಷ್ಕೋಟಿ ಲೇಖನ ಹಾಗೂ ಆಕರ್ಷಕ ಚಿತ್ರ ಮನಸ್ಸಿಗೆ ಮುದ ನೀಡಿತು. ಒಮ್ಮೆ ಅಲ್ಲಿಗೆ ಭೇಟಿ ನೀಡಬೇಕು ಎಂಬ ಬಯಕೆ ಆಯಿತು.

–ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ನಾರಾಯಣ ಯಾಜಿ ಶಿರಾಲಿ, ಹೆಚ್.ಗುಂಡೂರಾವ್ ಬೆಂಗಳೂರು

## ಆರಂಭವೇ ಕುತೂಹಲಕಾರಿ

ವಿವೇಕಾನಂದ ಕಾಮತ್ ಅವರ ಸ್ವೀಕಾರ ಕಾದಂಬರಿ ಆರಂಭದಲ್ಲೇ ಕುತೂಹಲದಿಂದ ಕೂಡಿದೆ. ಮುಂದಿನ ಕಂತುಗಳನ್ನು ಕಾತರದಿಂದ ಕಾಯುವಂತೆ ಮಾಡಿದೆ.

– ಎನ್.ಶೈಲಜಾ ಹಾಸನ

## ಅದ್ಭುತ

ವಂಡರ್‌ಪುಟದಲ್ಲಿ ‘ಸ್ಪೈಡರ್‌ಮ್ಯಾನ್ ಹಲ್ಲಿ’ ಚಿತ್ರ ಬರಹ ಅದ್ಭುತವಾಗಿದೆ.

–ಸುಂದರ್ ಬೆಂಗಳೂರು

**ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ**

ಮೂಡುಬಿದರೆಯ ವರ್ಧಮಾನ ಪ್ರಶಸ್ತಿ ಪೀಠ (ರಿ) ಪ್ರಶಸ್ತಿಗಾಗಿ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಿದೆ. ಈ ಬಾರಿಯ ಪ್ರಶಸ್ತಿಗಾಗಿ 2011ರಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರದ (ಕಾವ್ಯ, ಕಾದಂಬರಿ, ನಾಟಕ, ಸಣ್ಣಕಥೆ, ವಿಮರ್ಶೆ ಇತ್ಯಾದಿ) ಸಾಹಿತ್ಯ ಕೃತಿಗಳನ್ನು ಕಳುಹಿಸಬಹುದು. ಕೃತಿ ಕಳಿಸಲು ಕೊನೆಯ ದಿನ ಫೆಬ್ರುವರಿ 28. ಮಾಹಿತಿಗೆ: ಮುನಿರಾಜ ರೆಂಜಾಳ, ಸಹ ನಿರ್ದೇಶಕರು, ವರ್ಧಮಾನ ಸಾಹಿತ್ಯ ಪ್ರಶಸ್ತಿ ಪೀಠ, ಜೆ.ಜೆ.ಕಾಲೇಜು, ಮೂಡುಬಿದ್ರೆ 574227, ದ.ಕ. ಮೊಬೈಲ್: 9449936232

ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ




- ಜಿಡ್ಡು ರಹಿತ ‘ಸಂಧಿಲಿನ್’ ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು ‘SDM ಆಯುರ್ವೇದ ಫಾರ್ಮಸಿ’ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ